ಅಕ್ಷರಗಳೊಂದಿಗೆ ಆಡಿಕೊಳ್ಳಬೇಕಾದ ಸುಬ್ಬ ಎನ್ನುವ ಹುಡುಗ ಅಪ್ಪನ ಸಾಲದಿಂದಾಗಿ ಜೀತಕ್ಕೆ ಮಿಕವಾಗಿದ್ದಾನೆ. ಬಸವನದು ಕೂಡ ಸುಬ್ಬನ ಹಿನ್ನೆಲೆಯೇ ಆದರೂ ಅವನು ಸೇರಿದ ಮನೆ ಹೃದಯವಂತರದು. ಅವನು ಸುಂದರಪ್ಪ ಎನ್ನುವ ಹೆಸರಿನಲ್ಲಿ ಮುನ್ಸಿಫನಾಗುತ್ತಾನೆ. ಆದರೆ, ಪರಿಸ್ಥಿತಿಯ ಒತ್ತಡಕ್ಕೆ ಸಿಲುಕುವ ಸುಂದರಪ್ಪ ಮತ್ತೆ ಬಸವನಾಗುತ್ತಾನೆ – ಬಾಲ್ಯಕ್ಕೆ ಮರಳುತ್ತಾನೆ. ಸುಬ್ಬ ಮತ್ತು ಬಸವ ಎನ್ನುವ ಈ ಇಬ್ಬರು ಹುಡುಗರ ತವಕತಲ್ಲಣಗಳ, ರೋದನದ ಮತ್ತು ದುರಂತ ಅಂತ್ಯದ ಕಥನಗಳು 'ಸಾಲದ ಮಗು' ಮತ್ತು 'ಮುನ್ಸಿಫ'. ಈ ಹುಡುಗರು ಸಿನಿಮಾ ಚೌಕಟ್ಟಿನ ಭೂತಕಾಲದಿಂದ ಜೀವತಳೆದು ಜಿಗಿದು ನಮ್ಮ ಎದೆಗೂಡುಗಳಲ್ಲಿ ಕೂತು ಅಳು ಮುಂದುವರಿಸುತ್ತಾರೆ.

ಕಥನ, ಪರಿಸರ ಹಾಗೂ ನಿರೂಪಣಾ ಶೈಲಿಯ ಹಿನ್ನೆಲೆಯಲ್ಲಿ 'ಸಾಲದ ಮಗು' ಮತ್ತು 'ಮುನ್ಸಿಫ' ಚಿತ್ರಗಳಿಗೆ ಸಾಕಷ್ಟು ವ್ಯತ್ಯಾಸವಿದೆ. ಕಥನದ ಪರಿಣಾಮ ಹಾಗೂ ಆಶಯದ ದೃಷ್ಟಿಯಿಂದ ಎರಡೂ ಸಿನಿಮಾಗಳು ಒಂದರೊಳಗೊಂದು ತಳಕು ಹಾಕಿಕೊಂಡು, ಒಂದೇ ಆಗಿವೆ. ಉಮಾಶಂಕರ ಸ್ವಾಮಿ ನಿರ್ದೇಶನದ ಈ ಚಿತ್ರಗಳನ್ನು ನಾಣ್ಯವೊಂದರ ಎರಡು ಮುಖಗಳಾಗಿ ನೋಡಲು ಸಾಧ್ಯವಿದೆ. ನಿರ್ದೇಶಕನೊಬ್ಬನ ಸಾಮಾಜಿಕ ಕಾಳಜಿಯ ಅಭಿವ್ಯಕ್ತಿಯ ಬಿಡಿ ಚಿತ್ರಗಳಾಗಿ ಇವುಗಳನ್ನು ಗಮನಿಸಬಹುದು. 'ಮುನ್ಸಿಫ'ನ ಕಥೆ ನಡೆಯುವುದು ಬಯಲುಸೀಮೆಯಲ್ಲಿ, 'ಸಾಲದ ಮಗು' ಕಥೆ ಜರುಗುವುದು ದಟ್ಟ ಮಲೆನಾಡಿನಲ್ಲಿ. ಪ್ರಾದೇಶಿಕ ಆವರಣಗಳು ಬೇರೆಯಾದರೂ ಮನುಷ್ಯ ಸ್ವಭಾವದಲ್ಲಿ ವ್ಯತ್ಯಾಸವೇನೂ ಇಲ್ಲ. ಎರಡು ಚಿತ್ರಗಳ ನಾಯಕರೂ ಅಕಾಲದಲ್ಲಿ ಅಸುನೀಗುತ್ತಾರೆ. ನಾವು ಬದುಕುತ್ತಿರುವ ಜಗತ್ತಿನಲ್ಲಿ ಮಾನವೀಯತೆ ಕ್ಷೀಣಿಸುತ್ತಿದೆ ಎನ್ನುವ ವಿಷಾದವನ್ನು ಸುಬ್ಬ ಮತ್ತು ಬಸವನ ಬದುಕುಗಳು ನೋಡುಗರಲ್ಲಿ ಉಳಿಸುತ್ತವೆ. 'ಇಂಥ ಘಟನೆಗಳು ಮರುಕಳಿಸುವುದು ಬೇಡ' ಎನ್ನುವ ನಿರ್ದೇಶಕರ ಹಂಬಲ ನೋಡುಗರದೂ ಆಗುತ್ತದೆ.

ಎರಡೂ ಚಿತ್ರಗಳ ಕಥೆಯನ್ನು ಉಮಾಶಂಕರ ಸ್ವಾಮಿ ಸಾಹಿತ್ಯಕೃತಿಗಳಿಂದ ಪಡೆದುಕೊಂಡಿದ್ದಾರೆ. 'ಮುನ್ಸಿಫ' ಬಾಗಲೋಡಿ ದೇವರಾಯರ 'ಹುಚ್ಚ ಮುನ್ಸಿಫ' ಕಥೆಯನ್ನು ಆಧರಿಸಿದೆ. 'ಸಾಲದ ಮಗು' ಕುವೆಂಪು ಅವರ ಅದೇ ಹೆಸರಿನ ಕಥೆಯನ್ನು ಅವಲಂಬಿಸಿದೆ. ಸಾಹಿತ್ಯ ಕೃತಿಗಳ ಅಳವಡಿಕೆಯ ಕಾರಣದಿಂದಾಗಿ ಸ್ವಾಮಿ ಅವರ ಸಿನಿಮಾಗಳಿಗೆ ಪ್ರಾದೇಶಿಕ ಆವರಣವೊಂದು ತಂತಾನೇ ಒದಗಿಬಂದಿದೆ.

'ಮುನ್ಸಿಫ'ನ ಕಥೆ ಕೊಂಚ ಸಂಕೀರ್ಣವಾಗಿದ್ದರೆ, 'ಸಾಲದ ಮಗು' ಚಿತ್ರದ ಕಥೆ ಸರಳವಾದುದು. ಸುಬ್ಬ ಅಮ್ಮನನ್ನು ಕಳೆದುಕೊಂಡ ಹುಡುಗ. ಜಮೀನ್ದಾರರ ಹಟ್ಟಿಯಲ್ಲಿ ಜೀತಗಾರನಾಗಿ ದುಡಿಯುವ ಅಪ್ಪನಿಗೆ ತನ್ನ ಮಗನಿಗೆ ಮತ್ತೆ ಅಮ್ಮನನ್ನು ತರುವ ಉಮೇದು. ಆದರೆ, ಹೆಣ್ಣನ್ನು ಮನೆ ತುಂಬಿಸಿಕೊಳ್ಳಬೇಕಾದರೆ ಮುನ್ನೂರು ರೂಪಾಯಿ ವಧುದಕ್ಷಿಣೆ ನೀಡಬೇಕಾಗಿದೆ. ಇಷ್ಟೊಂದು ದೊಡ್ಡ ಮೊತ್ತದ ಸಾಲವನ್ನು ಕೊಡಲು ಒಡೆಯ ಒಪ್ಪುವುದಿಲ್ಲ. ಮದುವೆಯಾಗಿ ಬರುವ ಹೆಣ್ಣು ಕೂಡ ನಿಮ್ಮ ಮನೆಯಲ್ಲಿ ದುಡಿಯುತ್ತಾಳೆ ಎಂದರೂ ಒಡೆಯ ಒಪ್ಪುವುದಿಲ್ಲ. (ತೆರದ ಹಣಕ್ಕೆ ಪಟ್ಟು ಹಿಡಿಯುವ ಹೆಣ್ಣಿನ ಅಪ್ಪ ದುಷ್ಟನೇನಲ್ಲ, ದುರಾಸೆಯವನೂ ಅಲ್ಲ. ಅಳಿಯನಾಗುವವನಿಂದ ಪಡೆಯುವ ಹಣದ ಮೂಲಕ ತನ್ನ ಜೀತದ ಬಾಕಿಯನ್ನು ತೀರಿಸಿಕೊಳ್ಳುವ ಬಯಕೆ ಅವನದು). ಸುಬ್ಬನಿಗೆ ಕೊನೆಗೂ ಅಮ್ಮ ದೊರೆಯುವುದಿಲ್ಲ. ಅಷ್ಟು ಮಾತ್ರವಲ್ಲ – ಅಪ್ಪ ಕೂಡ ಸಾಯುತ್ತಾನೆ. ಅಪ್ಪನ ಬಾಕಿ ಮಗನ ಲೆಕ್ಕಕ್ಕೆ ಜಮೆಯಾಗಿ ಸುಬ್ಬ ಜೀತಕ್ಕೆ ಬೀಳುತ್ತಾನೆ. ಮಳೆಯ ರಾತ್ರಿಯೊಂದರಲ್ಲಿ ಸುಬ್ಬ ಹಾವು